**ಸಿಸಿ ಸಂಖ್ಯೆ - 85/2022** **ಪಿ.ಡಬ್ಲ್ಯೂ:-1**

ದಿನಾಂಕಃ **24-06-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು :- ಆರೋಪಿ ಪರ ವಕೀಲರಿಂದ :-

ನನ್ನ ಕೆನರಾ ಬ್ಯಾಂಕ್ ಖಾತೆಯ ನಂಬರ್ ನೆನಪಿಲ್ಲ. ನಿಪಿ-1 ಮತ್ತು 7 ಚೆಕ್ಕುಗಳನ್ನು ನನ್ನ ಕೆನರಾ ಬ್ಯಾಂಕ್ ನ ಖಾತೆಯ ನಗದೀಕರಣಕ್ಕೆ ಸಲ್ಲಿಸಿದ್ದೇನೆ ಎಂದರೆ ಸರಿ. ನಿಪಿ-2 ಹಿಂಬರಹದಲ್ಲಿ ಅಕೌಂಟ್ ನಂ."0584101014536" ನಿಮ್ಮ ಖಾತೆ ಸಂಖ್ಯೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ರೂ.1,35,000/- ಬೆಲೆ ಬಾಳುವ ತಿರಸ್ಕೃತ ಇಟ್ಟಿಗೆಗಳನ್ನು ಆಗಸ್ಟ್ ತಿಂಗಳ ಮೊದಲನೇ ವಾರದಲ್ಲಿ ಆರೋಪಿಯು ನಮಗೆ ವಾಪಾಸ್ಸು ಕಳುಹಿಸಿದ್ದಾರೆ ಎಂದರೆ ಸರಿಯಲ್ಲ. ರೂ.50,000/- ಹಣವನ್ನು ಆರೋಪಿಯು ನನ್ನ ಕೆನರಾ ಬ್ಯಾಂಕ್ ಖಾತೆಗೆ ದಿಃ 24-08-2021 ರಂದು ವ್ಯವಹಾರ ಸಂಖ್ಯೆ 4973925000 ಮೂಲಕ ವರ್ಗಾವಣೆ ಮಾಡಿದ್ದಾರೆ ಎಂದರೆ ಸರಿಯಲ್ಲ. ದಿಃ 29-08-2021 ರಂದು ವ್ಯವಹಾರ ಸಂಖ್ಯೆ 4998935006 ಮೂಲಕ ರೂ.25,000/- ಹಣವನ್ನು ನನ್ನ ಕೆನರಾ ಬ್ಯಾಂಕ್ ಖಾತೆಗೆ ಜಮಾ ಮಾಡಿದ್ದಾರೆ ಎಂದರೆ ಸರಿಯಲ್ಲ. ಆರೋಪಿಯು ನನ್ನ ಖಾತೆಗೆ ರೂ.50,000/- ಮತ್ತು ರೂ.25,000/- ಹಣವನ್ನು ವರ್ಗಾವಣೆ ಮಾಡಿರುವ ಸತ್ಯಾಂಶದ ವಿಚಾರ ನ್ಯಾಯಾಲಯಕ್ಕೆ ತಿಳಿಯುತ್ತದೆ ಎಂಬ ಉದ್ದೇಶಕ್ಕಾಗಿ ನನ್ನ ಕೆನರಾ ಬ್ಯಾಂಕ್ ಖಾತೆಯ ಪಾಸ್ ಪುಸ್ತಕ ಮತ್ತು ಸ್ಟೇಟ್ಮೆಂಟನ್ನು ಹಾಜರುಪಡಿಸುತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಈ ಪ್ರಕರಣವನ್ನು ದಾಖಲು ಮಾಡುವ ಸಮಯದಲ್ಲಿ ನಿಮ್ಮ ಖಾತೆಯ ಪಾಸ್ ಪುಸ್ತಕ ಮತ್ತು ಸ್ಟೇಟ್ಮೆಂಟನ್ನು ಕೊಟ್ಟಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಈಗ್ಗೆ 1 ತಿಂಗಳ ಹಿಂದೆ ನಮ್ಮ ವಕೀಲರಿಗೆ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶಕೋರಿದ್ದು, ನೀಡಿ ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.